# ಮೂವತ್ತನೇ ವರ್ಷ ನಾಲ್ಕನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ ಏ.5** ಕೊರೊನಾ ವೈರಸ್ ಹಿನ್ನೆಲೆಯಲ್ಲಿ ರಾಷ್ಟ್ರ ಲಾಕ್‌ಡೌನ್‌ನಿಂದಾಗಿ ಮುರುಘರಾಜೇಂದ್ರ ಮಠದಲ್ಲಿ ಪ್ರತಿತಿಂಗಳು 5ನೇ ತಾರೀಖು ನಡೆಯುವ ಸಾಮೂಹಿಕ ಕಲ್ಯಾಣ ಮಹೋತ್ಸವವನ್ನು ಮುಂದೂಡಲಾಗಿತ್ತು. ಲಾಕ್‌ಡೌನ್‌ಗೂ ಮುನ್ನ 18 ಜೋಡಿಗಳು ನೊಂದಣಿಯಾಗಿದ್ದವು. ಫೋನ್ ಕರೆ ಮೂಲಕ ಎಲ್ಲರಿಗೂ ಕಲ್ಯಾಣ ಮಹೋತ್ಸವ ಮುಂದೂಡಲಾಗಿದೆ ಎಂಬ ಮಾಹಿತಿಯನ್ನು ರವಾನಿಸಲಾಗಿತ್ತು. ಆದಾಗ್ಯೂ ಇಂದು ಬೆಳಗ್ಗೆ ಮೂರು ಜೋಡಿಗಳು ಶ್ರೀಮಠಕ್ಕೆ ಆಗಮಿಸಿ ನಮ್ಮ ವಿವಾಹಕ್ಕೆ ಶ್ರೀಗಳ ಆಶೀರ್ವಾದ ಬೇಕೆಂದು ಅವರ ತಂದೆ-ತಾಯಿಯರು ಕೇಳಿಕೊಂಡದ್ದರಿಂದ ಕಳೆದ ಮೂವತ್ತು ವರ್ಷಗಳಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿರುವ 30ನೇ ವರ್ಷದ ನಾಲ್ಕನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವಕ್ಕೆ ಶ್ರೀಗಳು ಒಪ್ಪಿಗೆ ಸೂಚಿಸಿದರು.



ವಧು-ವರರ ತಂದೆ ತಾಯಿಗಳನ್ನು ಹೊರತುಪಡಿಸಿ ಬೇರೆ ಯಾರೂ ಮಹೋತ್ಸವಕ್ಕೆ ಆಗಮಿಸಿರಲಿಲ್ಲ. ಮೂರು ಜೋಡಿಯಿಂದ ಒಟ್ಟು 17 ಜನ ಭಾಗವಹಿಸಿದ್ದರು. ಎಲ್ಲರೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ನೋಡಿಕೊಂಡು ಪ್ರತಿಯೊಬ್ಬರಿಗೂ ಸ್ಯಾನಿಟೈಸರ್ ಹಾಗೂ ಮಾಸ್ಕ್ ವಿತರಿಸಲಾಯಿತು. ಸರ್ಕಾರದ ಆದೇಶಕ್ಕೆ ಎಲ್ಲಿಯೂ ಧಕ್ಕೆ ಬಾರದಂತೆ ಸಾಮಾಜಿಕ ಅಂತರ ಕಾಯ್ದುಕೊಂಡು ಕಾನೂನನ್ನು ಉಲ್ಲಂಘಿಸದೆ ಡಾ. ಶಿವಮೂರ್ತಿ ಮುರುಘಾ ಶರಣರು ವಧು-ವರರಿಗೆ ತಾಳಿ, ಬಟ್ಟೆ ಕೊಡುವುದರೊಂದಿಗೆ ಪುಷ್ಪಾರ್ಚನೆ ಮಾಡಿ ಆಶೀರ್ವದಿಸಿದರು. ಯಾವುದೇ ಅತಿಥಿಗಳಿಲ್ಲದೆ, ಭಾಷಣವಿಲ್ಲದೆ ಎಮ್ಮವರು ಬೆಸಗೊಂಡಡೆ ಶುಭ ಲಗ್ನವೆನ್ನಿರಯ್ಯ ಎಂಬ ವಚನದೊಂದಿಗೆ ಸರಳವಾಗಿ ಐದು ನಿಮಿಷದಲ್ಲಿ ಮುಕ್ತಾಯಗೊಂಡಿತು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಜಿ. ದೊರೆಸ್ವಾಮಿ, ಆರ್. ಲಿಂಗರಾಜು ಇದ್ದರು. ಜಮುರಾ ಕಲಾವಿದರು ವಚನ ಗಾಯನ ಮಾಡಿದರು.








ಮೂವತ್ತನೇ ವರ್ಷ ನಾಲ್ಕನೇ ತಿಂಗಳ

